ದಿನಾಂಕಃ 18.10.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

8. ಕೃತ್ಯ ನಡೆದ ಸಮಯದಲ್ಲಿ ನಾನು ಹಣದೊಂದಿಗೆ ಆ ದಿನ ಹಣವನ್ನು ಕಲೆಕ್ಷನ್ ಆಗಿದ್ದನ್ನು ನಮೂದು ಮಾಡಿರುವ ಕಲೆಕ್ಷನ್ ಬುಕ್ ಮತ್ತು ನಾನು ಕೆಲಸ ಮಾಡುತ್ತಿದ್ದ ರೂಟಿಗೆ ಸಂಬಂಧಿಸಿದ ಅಂಗಡಿಗಳ ಸೇಲ್ಸ್ ಆರ್ಡರ್ ಬಿಲ್ಲುಗಳನ್ನು ತೆಗೆದುಕೊಂಡು ಹೋಗುತ್ತಿದ್ದೆನು. ಸದರಿ ಕಲೆಕ್ಷನ್ ಬುಕ್ ಮತ್ತು ಬಿಲ್ಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಹಣ ಕಲೆಕ್ಷನ್ ಬುಕ್ ನ್ನು ನೋಡುತ್ತಿದ್ದು ಅದನ್ನು ನಿಪಿ.5 ಎಂದು ಗುರುತಿಸಲಾಯಿತು. ಆ ದಿನ ನಾನು ತೆಗೆದುಕೊಂಡು ಹೋಗುತ್ತಿದ್ದ ಬಿಲ್ಲುಗಳನ್ನು ನೋಡುತ್ತಿದ್ದು ಅವುಗಳನ್ನು ಒಟ್ಟಾಗಿ ನಿಪಿ.6 ಎಂದು ಗುರುತಿಸಲಾಯಿತು.

9. ದಿನಾಂಕ 25.08.2015 ರಂದು ಪೊಲೀಸರು ರಾಬರಿ ಮಾಡಿದ ವ್ಯಕ್ತಿಗಳು ಸಿಕ್ಕಿರುವುದಾಗಿ ಹೇಳಿ ನನ್ನನ್ನು ಪುನಃ ಠಾಣೆಗೆ ಕರೆಸಿದ್ದರು. ಆಗ ಪೊಲೀಸರು ಇಬ್ಬರು ರಾಬರಿ ಮಾಡಿದ ವ್ಯಕ್ತಿಗಳನ್ನು ತೋರಿಸಿ ಅವರ ಹೆಸರು ಕುಮಾರ ಮತ್ತು ದಿನೇಶ ಎಂದು ತಿಳಿಸಿದರು. ಆ ವ್ಯಕ್ತಿಗಳನ್ನು ನಾನು ಕೃತ್ಯ ನಡೆದ ಸಮಯದಲ್ಲಿ ನೋಡಿದ್ದೇನೆ. ಕುಮಾರ ಎಂಬ ವ್ಯಕ್ತಿ ಕ್ಯಾಷ್ ಬ್ಯಾಗ್ ನ್ನು ಕಿತ್ತುಕೊಳ್ಳುವ ಸಮಯದಲ್ಲಿ ಮಚ್ಚಿನಿಂದ ನಾನು ಕುಳಿತಿದ್ದ ವಾಹನದ ಗ್ಲಾಸಿಗೆ ಬೀಸಿದಾಗ ಅದು ನನ್ನ ಎಡಗೈನ ಮಧ್ಯದ ಬೆರಳಿಗೆ ತಗಲು ರಕ್ತಗಾಯವಾಗಿತ್ತು, ಆಗ ಆತನನ್ನು ನೋಡಿದ್ದೇನೆ. ದಿನೇಶ ಎಂದು ತೋರಿಸಲ್ಪಟ್ಟ ವ್ಯಕ್ತಿಯನ್ನು ಆತ ಘಟನಾ ಸಮಯದಲ್ಲಿ ನಮ್ಮ

ವಾಹನದ ಚಾಲಕನಾದ ಚಂದ್ರು ಸಿಂಗ್ ಗೆ ಚಾಕುವನ್ನು ತೋರಿಸುತ್ತಿದ್ದಾಗ ನೋಡಿದ್ದೇನೆ. ಉಳಿದ ಆರೋಪಿತರ ಪೈಕಿ ಮಹಾನ್ ನಮ್ಮ ಏಜೆನ್ಸಿಯಲ್ಲಿ ಕೆಲಸ ಮಾಡಿಕೊಂಡಿದ್ದು ನಂತರ ಕೆಲಸ ಬಿಟ್ಟು ಹೋಗಿದ್ದನು. ಅದೇ ದಿನ ದಿನೇಶ ಮತ್ತು ಕುಮಾರ ನನಗೆ ಮತ್ತು ಪೊಲೀಸರಿಗೆ ಪೊಲೀಸ್ ಠಾಣೆಯ ಕೊಠಡಿಯಲಿದ್ದ ಮಧು, ಕಿರಣ್, ಗೌಡ್ರು ಮೆಸ್ ರಘು ರವರನ್ನು ತೋರಿಸಿ ಅವರೂ ಸಹ ಕೃತ್ಯದಲ್ಲಿ ಭಾಗಿಯಾಗಿರುವುದಾಗಿ ಮತ್ತು ಅವರುಗಳ ಪೈಕಿ ಸುನೀಲ್ ಮತ್ತು ಬಾಲು ತಲೆ ಮರೆಸಿಕೊಂಡಿರುವುದಾಗಿ ತಿಳಿಸಿದರು. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ 1 ನೇ ಆರೋಪಿ ಕುಮಾರ, 3 ಆರೋಪಿ ಚಂದ್ರ ಸಿಂಗ್, 4 ನೇ ಆರೋಪಿ ಮಧು, 5 ನೇ ಆರೋಪಿ ಕಿರಣ್, 6 ನೇ ಆರೋಪಿ ಮಹಾನ್, ಮತ್ತು 7 ನೇ ಆರೋಪಿ ರಘು ರವರನ್ನು ನೋಡಿ ಗುರುತಿಸಿರುತ್ತಾರೆ.

**(ಪಾಟೀ ಸವಾಲು: 1, 3 ಮತ್ತು 4 ನೇ ಆರೋಪಿತರ ಪರ ವಕೀಲರು ಚಾಸಾ.7 ಮತ್ತು ಚಾಸಾ.8 ರವರ ವಿಚಾರಣೆಯಾಗುವವರೆಗೆ ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿ ಅರ್ಜಿ ಸಲ್ಲಿಸಿದ ಮೇರೆಗೆ ಅದನ್ನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿಕ್ಕಮಗಳೂರು.

ಸಾಕ್ಷಿಯ ಸಹಿ